**ಹೆಣ್ಣುಮಕ್ಕಳಿಗೆ ಸುರಕ್ಷತೆ ಇದೆಯಾ?**

ಮಹಿಳೆಯರಿಗೆ ಮತ್ತು ಮಕ್ಕಳಿಗೆ ಇಲ್ಲಿ ಸೂಕ್ತ ಭದ್ರತೆ ಇಲ್ಲ. ಪುಟ್ಟ ಮಕ್ಕಳೂ ಇಲ್ಲಿ ದೈಹಿಕವಾಗಿ ಶ್ರಮದ ಕೆಲಸಗಳನ್ನ ಮಾಡಲೇ ಬೇಕು. ಒಂಬತ್ತು ವರ್ಷದೊಳಗಿನ ಹೆಣ್ಣು ಮಕ್ಕಳು ಗಂಟೆಗಟ್ಟಲೇ ನೀರು ಹೊತ್ತು ತರುವುದು, ಕಾಡಿಗೆ ಹೋಗಿ ಪುರುಲೆ ಕಟ್ಟಿಗೆ ಹೆಕ್ಕಿ ಅಥವಾ ಏನೂ ಸಿಗದಿದ್ದಾಗ ಒಣಗಿದ ಎಲೆಗಳನ್ನು ಆರಿಸಿಕೊಂಡು ಬರುವುದು, ಹತ್ತು ವರ್ಷದೊಳಗಿನ ಮಕ್ಕಳು ರಾಶಿ ರಾಶಿ ಬಟ್ಟೆಗಳನ್ನ ಒಗೆಯುವುದನ್ನ ಸಾಮಾನ್ಯವಾಗಿ ನೀವಿಲ್ಲಿ ನೋಡಬಹುದು. ಇಲ್ಲಿ ಹೆಣ್ಣು ಮಕ್ಕಳು ನಿತ್ಯ ಬೆನ್ನು ನೋವು, ಕುತ್ತಿಗೆ ನೋವು, ಕಿಬ್ಬೊಟ್ಟೆಯ ನೋವಿನಿಂದ ನರಳುತ್ತಾರೆ. ಅಪ್ರಾಪ್ತ ವಯಸ್ಸಿನ ಹುಡುಗಿಯರ ಮೇಲೆ, ಮಹಿಳೆಯರ ಮೇಲೆ ಅತ್ಯಾಚಾರಗಳೂ ನಿರಂತರವಾಗಿ ನಡೆಯುತ್ತವೆ. ಆ ಸಣ್ಣ ವಯಸ್ಸಿನಲ್ಲಿ ಏಡ್ಸ್ ಆಗಲಿ ಲೈಂಗಿಕವಾಗಿ ಹರಡುವ ಸೋಂಕುಗಳಾಗಲೀ ಅವರಿಗೆ ತಗುಲಿರುವುದಿಲ್ಲ ಎಂಬ ಗ್ರಹಿಕೆ ಗಂಡಸರದ್ದು. ಹಾಗಾಗಿ ಎಳೆಯ ಹುಡುಗಿಯರು ಅವರ ಪಾಲಿಗೆ ಅಪಾಯರಹಿತ ಗುರಿಗಳು. ಎಷ್ಟೋ ಎಳೆಯ ಹುಡುಗಿಯರು ತಮ್ಮ ಮೇಲೆ ದೌರ್ಜನ್ಯ ನಡೆದರೂ ಯಾರಿಗೂ ಹೇಳಿಕೊಳ್ಳಲಾಗುವುದಿಲ್ಲ. ಯಾಕೆಂದರೆ ಹೇಳಲು ಅವರ ಬದುಕಿನಲ್ಲಿ ದೊಡ್ಡವರ್‍ಯಾರು ಇರುವುದಿಲ್ಲ. ಹೀಗಾಗಿ ಬಹುತೇಕರು ತಮಗೆ ಅರಿವಿದ್ದೋ, ಅರಿವಿಲ್ಲದೆಯೋ ಎಸ್ ಟಿ ಡಿ ಅಥವಾ ಏಡ್ಸ್ ನಂತಹ ಲೈಂಗಿಕ ಕಾಯಿಲೆಗಳಿಗೆ ತುತ್ತಾಗುವುದು ಇಲ್ಲಿ ಸರ್ವೇ ಸಾಮಾನ್ಯ.

◆ **ನಿರಾಶ್ರಿತರ ಶಿಬಿರವನ್ನು ನಡೆಸುವ ಉಸ್ತುವಾರಿ ಯಾರದು ಮತ್ತು ಅದನ್ನು ನಿರ್ವಹಿಸಲು ಹಣ ಎಲ್ಲಿಂದ ಬರುತ್ತದೆ?**

ಈ ಶಿಬಿರದಲ್ಲಿರುವ ಎಲ್ಲಾ ನಿರಾಶ್ರಿತರ ನಿಗಾ UNHCR (ಯುನೈಟೆಡ್ ನೇಷನ್ಸ್ ಹೈ ಕಮಿಷನ್ ಫಾರ್ ರೆಫ್ಯೂಜೀಸ್) ವಹಿಸಿಕೊಂಡಿದೆ. ನಮಗಾಗಿ ದೇಣಿಗೆ ಸಂಗ್ರಹಿಸುವುದು, ಆಹಾರ ಮತ್ತು ಅತ್ಯಗತ್ಯದ ವೈದ್ಯಕೀಯ ಸೌಲಭ್ಯಗಳನ್ನ ಒದಗಿಸುವುದು ಮತ್ತು ವಿದೇಶಗಳಲ್ಲಿ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದು...

◆ **ಈಗ ನೀವಿರುವ ರೆಫ್ಯೂಜಿ ಕ್ಯಾಂಪಿನ ಹೆಸರೇನು? ರೆಫ್ಯೂಜಿ ಎಂಬ ಪದವನ್ನು ಹೇಗೆ ವ್ಯಾಖ್ಯಾನಿಸುವಿರಿ?**

ನಮ್ಮ ರೆಫ್ಯೂಜಿ ಕ್ಯಾಂಪಿನ ಹೆಸರು Dazaleka. ಇದು ಪೂರ್ವ ಆಫ್ರಿಕಾದ ಮಲಾವಿ ಎಂಬ ದೇಶದಲ್ಲಿದೆ. ಲಿಕುನಿ, ಸೆಕ್ಟರ್ ನಂಬರ್ 2, ಹೌಸ್ ನಂಬರ್ 104 ಇದು ನನ್ನ ವಿಳಾಸ.

ತಪ್ಪಿಸಿಕೊಳ್ಳಲಾಗದೆ ಭಯಾನಕ ಸಂಘರ್ಷದಲ್ಲಿ ಸತ್ತವರು ಬಲಿಪಶುಗಳು. ಬದುಕುಳಿದ ನಾವು ನಿರಾಶ್ರಿತರು. ನಮ್ಮ ಜೀವವೇನೊ ಉಳಿಯಿತು. ಆದರೆ ಬದುಕಿನ ಜೊತೆಗೆ ಘನತೆಯೂ ಕಳೆದುಹೋಯಿತು. UNHCR ನಮ್ಮೆಲ್ಲರ ಚೈತನ್ಯವನ್ನು ಪುನಃ ಒಗ್ಗೂಡಿಸಲು ಪ್ರಯತ್ನಿಸುತ್ತಿದೆ. ಎಲ್ಲರಿಗಿಂತ ಹೆಚ್ಚು ಅಸಾಧ್ಯವಾದ ಬದುಕುವ ಹಂಬಲವನ್ನ ನಿರಾಶ್ರಿತ ಮಹಿಳೆಯರಲ್ಲಿ ಕಾಣಬಹುದು. ಹೇಗಾದರೂ ಹೊಂದಿಕೊಳ್ಳುವ, ಕುಟುಂಬವನ್ನ ಒಟ್ಟಿಗಿಡುವ ಮತ್ತು ಕಡು ಕಷ್ಟವನ್ನು ನಗುವಿನಲ್ಲಿ ತೇಲಿಸುವ ಅವರ ಸಾಮರ್ಥ್ಯ ಅಚ್ಚರಿ ಹುಟ್ಟಿಸುತ್ತದೆ. ತಾಯಂದಿರನ್ನೇನೂ ಉಕ್ಕಿನಿಂದ ಮಾಡಿಲ್ಲ. ಅವರು ಕೂಡ ರಕ್ತ ಮಾಂಸಗಳಿಂದಾದ ಮನಷ್ಯರೇ. ಆದರೂ ಹೆಣ್ಣಿಗೆ ಚರಿತ್ರೆಯ ಕರಾಳ ಅಧ್ಯಾಯಗಳನ್ನು ಎದುರಿಸುವ ಶಕ್ತಿ ಸಾಮರ್ಥ್ಯ ಎಲ್ಲಿಂದ ದಕ್ಕುತ್ತೋ ನನಗೆ ಗೊತ್ತಾಗುತ್ತಿಲ್ಲ.

◆ **ನಿಮ್ಮ ಶೈಕ್ಷಣಿಕ ಹಿನ್ನಲೆ ಏನು? ನಿಮ್ಮ ಓದು ಬರಹವನ್ನು ಹೇಗೆ ನಿರ್ವಹಿಸುತ್ತಿದ್ದೀರಿ?**

ಪ್ರಾಥಮಿಕ ವ್ಯಾಸಂಗವನ್ನು ಅಂದರೆ 5ನೇ ತರಗತಿಯವರೆಗೆ ನಾನು ಕಾಂಗೋದಲ್ಲಿ ಓದಿದೆ. ಇಲ್ಲಿಗೆ ಬಂದ ಮೇಲೆ ನಾನು ಮತ್ತೆ ಮೂರನೇ ತರಗತಿಯಿಂದ ಶಿಕ್ಷಣ ಆರಂಭಿಸಬೇಕಾಯ್ತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನಾನು ಈ ಶಿಬಿರದ ಗೋಡೆಗಳ ನಡುವೆಯೇ ಪಡೆದೆ. ನಿರಾಶ್ರಿತ ಶಿಬಿರಗಳಲ್ಲಿ ಬೆಳೆದ ನಾನು, ಇಲ್ಲಿನ ತರಗತಿಗಳಲ್ಲಿ ವಿಷಯಗಳನ್ನ ಗ್ರಹಿಸುವುದು ಕಷ್ಟಕರವಾಗಿತ್ತು. ಕಿಕ್ಕಿರಿದ ಶಾಲಾ ಕೊಠಡಿಗಳಲ್ಲಿ ನಿರಾಶ್ರಿತ ಮಕ್ಕಳಿಗೆ ಪಾಠ ಹೇಳಿಕೊಡಲು ಬತ್ತದ ಉತ್ಸಾಹ ಹಾಗೂ ನೈಜ ಮಾನವೀಯ ಕಾಳಜಿ ಇರುವ ಶಿಕ್ಷಕರು ಬೇಕಾಗಿದ್ದಾರೆ. Dazaleka ದ ಸಾಮುದಾಯಿಕ ಪ್ರೌಢ ಶಾಲೆಯ form 3 ಯಲ್ಲಿ ನಾನೀಗ ಕಲಿಯುತ್ತಿದ್ದೇನೆ.